ಮಾಡಿದ್ದೇವೆ. ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಮಾರ್ಕ್ಸ್‌ಕಾರ್ಡ್ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ.

304 (2030)

ಶ್ರೀ ವಸಂತ ವಿ ಸಾಲಿಯಾನ (ಕಾಪು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು (ಉಡುಪಿ ಜಿಲ್ಲೆ) ಇದರ ಕಟ್ಟಡದ ಕಾಮಗಾರಿಗೆ ಸರ್ಕಾರ ಮಂಜೂರಾತಿ ನೀಡಿದ ದಿನಾಂಕ ಯಾವುದು ಹಾಗೂ ಅದರ ಮೊತ್ತವೆಷ್ಟು; ಇದುವರೆಗೆ ಬಿಡುಗಡೆಯಾದ ಹಣ ಎಷ್ಟು?

ಆ) ಈ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಯಿತು; ಇದರ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ; ಈ ಬಗ್ಗೆ ಆಗುತ್ತಿರುವ ವಿಳಂಬಕ್ಕೆ ಕಾರಣವೇನು; ಇದರ ನಿರ್ಮಾಣ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎ.ಮೊಯ್ದೀನ್ (ಉನ್ನತ ಶಿಕ್ಷಣ ಸಚಿವರು):

ಅ) ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕಾಮಗಾರಿಗಾಗಿ ಸರ್ಕಾರಿ ಆದೇಶ ಸಂಖ್ಯೆ: ಇಡಿ-176-ಯುಇಸಿ-96 ದಿನಾಂಕ 28-1-97ರಲ್ಲಿ ರೂ.12.00 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಗಾಗಿ ಒಟ್ಟು ಮೊತ್ತ ರೂ.8.65 ಲಕ್ಷಗಳನ್ನು ಇದುವರೆಗೂ ಬಿಡುಗಡೆ ಮಾಡಲಾಗಿದೆ.

ಆ) ಈ ಕಾಮಾಗಾರಿಯನ್ನು 1997-98ರಲ್ಲಿ ಕೈಗೆತ್ತಿಕೊಳ್ಳಲಾಯಿತು. ನಿರ್ಮಾಣ ಕಾರ್ಯವು ಲಿಂಟಲ್ ಹಂತದಲ್ಲಿದೆ. ಹಣಕಾಸಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸದರಿ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಉಪಾಧ್ಯಕ್ಷರೆ, ಕಳೆದ ಐದು ವರ್ಷಗಳಲ್ಲಿ 15ನೇ ಬಾರಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಐದು ವರ್ಷಗಳಲ್ಲಿ ಇವರು ಮಾಡಿದ

ಸಾಧನೆ ಏನೆಂದರೆ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೇವೆಂದು ಹೇಳಿದರು, ಕಟ್ಟಡದ ಕೆಲಸ ಪ್ರಾರಂಭವಾಗಿದೆಯೆಂದು ಹೇಳಿದ್ದಾರೆ. 8 ಲಕ್ಷದ 65 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ಏಕೆಂದರೆ ಮಾನ್ಯಮಂತ್ರಿಗಳು ಅಲ್ಲಿಗೆ ಬಂದಿದ್ದರು. 8ಲಕ್ಷದ 65ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ನಿಜವಾಗಿಯೂ ಬಿಡುಗಡೆ ಮಾಡಿದ ಹಣ ಕಂಟ್ರಾಕ್ಟರ್‌ಗೆ 1ಲಕ್ಷ ರೂಪಾಯಿಗಳು. ಅವನು ಖರ್ಚು ಮಾಡಿದ ಹಣ ಸುಮಾರು 12ಲಕ್ಷ ರೂಪಾಯಿಗಳು. ಈಗ ಅವನು ಕೆಲಸ ನಿಲ್ಲಿಸಿದ್ದಾನೆ, ಕೆಲಸ ಆಗುತ್ತಿಲ್ಲ. ಮೊನ್ನೆ ಅಧಿವೇಶನದಲ್ಲಿ ಹೇಳಿದ್ದೇನೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಆ ಕಟ್ಟಡ ನೋಡುವುದಕ್ಕೆ ಭೇಟಿ ಮಾಡಿದ್ದರು. ಅಲ್ಲಿ ಏನು ವ್ಯವಸ್ಥೆ ಇದೆಯೆಂದರೆ ಬಾಡಿಗೆ ಕಟ್ಟಡದಲ್ಲಿ ಕಾಲೇಜು ನಡೆಸುತ್ತಿದ್ದಾರೆ. ಅವರು ಕಟ್ಟಡಕ್ಕೆ ಬೀಗ ಹಾಕಿದರು. ಆಮೇಲೆ ನಾನು ಹಿಂದುಳಿದ ವರ್ಗಗಳವರ ಹಾಸ್ಟಲಿನಲ್ಲಿ ಅವರಿಗೆ ಕ್ಲಾಸುಸ್ ನಡೆಯುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಇಲ್ಲದಿದ್ದರೆ ಆ ಮಕ್ಕಳು ಮರದ ಅಡಿಯಲ್ಲಿ ಲೆಕ್ಚರ್ ಕೇಳಿ ಕಲಿಯಬೇಕಾದ ವ್ಯವಸ್ಥೆ ಇದೆ. ಐದು ವರ್ಷದಲ್ಲಿ ಸರ್ಕಾರ ಮಾಡಿದ ವ್ಯವಸ್ಥೆ ಇಷ್ಟೆ. ಆದ್ದರಿಂದ ಇವತ್ತು ನಾನು ಕೇಳುತ್ತಿದ್ದೇನೆ, ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರಿಗೆ ಹೇಳಿದ್ದೇನೆ. ಕೂಡಲೇ ಇದಕ್ಕೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಯೆಂದು. ಕೆಲಸವನ್ನು ಒಂದು ತಿಂಗಳಿನಲ್ಲಿ ಪೂರ್ತಿ ಮಾಡಬೇಕು. ಇಲ್ಲದಿದ್ದರೆ ಅಲ್ಲಿನ ಕಾಲೇಜನ್ನು ಬಂದ್ ಮಾಡುವುದು ಒಳ್ಳೆಯದು. ಏಕೆಂದರೆ ಐದು ವರ್ಷಗಳಲ್ಲಿ ನಿಮಗೆ 1 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂತಹ ಯೋಗ್ಯತೆ ಸರ್ಕಾರಕ್ಕೆ ಇಲ್ಲದಿದ್ದರೆ ನೀವು ಏಕೆ ಕಾಲೇಜು ನಡೆಸುತ್ತಿದ್ದೀರಿ? ಅದನ್ನು ಮುಚ್ಚಬೇಕಾಗಿತ್ತು. ಆದ್ದರಿಂದ, ನಾನು ಹೇಳುತ್ತಿದ್ದೇನೆ, ಅಲ್ಲಿ ಒಂದು ಕಡೆ ಅಧ್ಯಾಪಕರ ಕೊರತೆಯಿದೆ. ಸಾರ್ವಜನಿಕರಿಂದ ತಿಂಗಳಿಗೆ 15 ಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿ ಪಾರ್ಟ್‌ಟೈಮ್ ಲೆಕ್ಚರರ್‌ಗಳಿಗೆ ಹಣ ಕೊಡುತ್ತಿದ್ದೇವೆ. ಒಂದು ಕಡೆ ನಿಮಗೆ ಅಧ್ಯಾಪಕರನ್ನು ನೇಮಕ ಮಾಡಲಿಕ್ಕೆ ಯೋಗ್ಯತೆಯಿಲ್ಲ, ಕಟ್ಟಡವನ್ನು ಮಾಡಲಿಕ್ಕೆ ಯೋಗ್ಯತೆಯಿಲ್ಲ. ಅಲ್ಲಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಬಂದಿದ್ದರು ಅವರಿಗೆ ಎಲ್ಲಾ ವಿಚಾರ ಗೊತ್ತಿದೆ. ಅವರಲ್ಲಿ ನಾನು ಏನಂತಿ ಮಾಡಿಕೊಳ್ಳುತ್ತೇನೆ ಬೇಡಿಕೊಳ್ಳುತ್ತಿದ್ದೇನೆ, ಒಂದು ತಿಂಗಳಿನಲ್ಲಾದರೂ ಕಟ್ಟಡವನ್ನು ಪೂರ್ತಿ ಮಾಡಬೇಕು. ಮತ್ತೆ ಅಧ್ಯಾಪಕರ ಕೊರತೆ ಏನಿದೆ ಅದನ್ನು ನೀಗಿಸಬೇಕೆಂದು ಇದನ್ನು ನಿಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ.ಮೊಯ್ದೀನ್: ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ನನಗೆ ದೊರೆತಂತಹ ಅಧಿಕೃತವಾಗಿರತಕ್ಕ ಅಂಕಿಅಂಶಗಳ ಪ್ರಕಾರ ನನಗೆ ಒದಗಿಸಿರತಕ್ಕ ಮಾಹಿತಿಯ ಪ್ರಕಾರ ಆ ಕಟ್ಟಡದ ಕಾಮಗಾರಿ ಅದರ ಎಸ್ಟಿಮೇಟ್ 12 ಲಕ್ಷ ರೂಪಾಯಿಗಳು. ಈಗಾಗಲೇ 1996-97ರಲ್ಲಿ 4 ಲಕ್ಷ ರೂಪಾಯಿಗಳು 1997-98ರಲ್ಲಿ

2 ಲಕ್ಷ ರೂಪಾಯಿಗಳು 1998-99ರಲ್ಲಿ 2 ಲಕ್ಷ 45 ಸಾವಿರ ರೂಪಾಯಿಗಳು. ಈ ಸಲ ನಾವು 2 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಒಟ್ಟು 8 ಲಕ್ಷದ 65ಸಾವಿರ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಆದರೆ ಉಳಿದಿರತಕ್ಕ 3 ಲಕ್ಷದ 35 ಸಾವಿರ ರೂಪಾಯಿಗಳನ್ನು ನಾವು ಇನ್ನೂ ಬಿಡುಗಡೆ ಮಾಡಬೇಕಾಗಿದೆ. ಅದನ್ನು ಬಿಡುಗಡೆ ಮಾಡುವುದಕ್ಕೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ್ದೇನೆ, ನಮಗೆ ಕಟ್ಟಡಗಳಿಗೆ ಅನುದಾನ ಬಹಳ ಕಡಿಮೆಯಾಗಿದೆ. ಕೇವಲ 50 ಲಕ್ಷ ರೂಪಾಯಿಗಳು ಮಾತ್ರ ಇದೆ. ಹಣಕಾಸು ಸಚಿವರು 5 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಕೂಡಲೇ ಹಣಕಾಸು ಇಲಾಖೆಯಿಂದ ನನ್ನ ಇಲಾಖೆಗೆ ಹಣ ಬಿಡುಗಡೆ ಆದ ತಕ್ಷಣ ನಾನು ಖಂಡಿತಾ ಹಣ ಬಿಡುಗಡೆ ಮಾಡುತ್ತೇನೆ. ಇದನ್ನೆಲ್ಲ ಏಕೆ ಮಾಡಬೇಕು? ಏಕೆ ಬೇಕಾಗಿತ್ತು? ಕಾಲೇಜನ್ನು ಮಾಡಿದ್ದೆ ನಿಮ್ಮ ಒತ್ತಡದಿಂದ. ಈಗಲೂ ಕೂಡ ನೂರಾರು ಕಾಲೇಜುಗಳು ಬೇಕೆಂದು ಒತ್ತಡವಿದೆ. ನಾನು ಒಂದು ಕಾಲೇಜಿಗೂ ಅನುಮತಿಯನ್ನು ಕೊಡುತ್ತಿಲ್ಲ. ಏಕೆಂದರೆ ಈ ತರಹ ಆಗಬಾರದು. ಬಹುಶಃ ನಿಮಗೆ ಗೊತ್ತಿದೆಯೋ ಇಲ್ಲವೊ? ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯದಲ್ಲಿರುವಷ್ಟು ಸರ್ಕಾರಿ ಕಾಲೇಜುಗಳು ಬೇರೆ ಯಾವ ರಾಜ್ಯಗಳಲ್ಲೂ ಇಲ್ಲ. ನಮ್ಮಲ್ಲಿ 150 ಕಾಲೇಜುಗಳಿವೆ. ದೊಡ್ಡ ರಾಜ್ಯವಾದ ತಮಿಳುನಾಡಿನಲ್ಲಿ ನೂರಕ್ಕಿಂತ ಕಡಿಮೆ ಕಾಲೇಜುಗಳಿವೆ. ಆಂಧ್ರಪ್ರದೇಶದಲ್ಲೂ ಕೂಡ ಅಷ್ಟು ಇಲ್ಲ. ತಾವು ಹೇಳಿದ್ದೀರಿ ಎಂದೂ ಒತ್ತಡಕ್ಕೆ ಮಣಿದು ಕಾಲೇಜು ಕೊಡುವುದನ್ನು ನಿಲ್ಲಿಸಬೇಕೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಈಗ ಕೊಟ್ಟಾಗಿದೆ. ಕೊಟ್ಟಾದಮೇಲೆ ಏನಾದರೂ ಮಾಡಿ ಇದಕ್ಕೆ ಹೆಚ್ಚು ಹಣ ಒದಗಿಸತಕ್ಕಂಥ ಎಲ್ಲ ಪ್ರಯತ್ನವನ್ನು ನಾನು ಮಾಡುತ್ತೇನೆ ಎನ್ನತಕ್ಕಂಥ ವಾಗ್ದಾನವನ್ನು ನಮ್ಮ ಉಪಾಧ್ಯಕ್ಷರ ಮೂಲಕ ನಿಮಗೆ ನಾನು ತಿಳಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವಶ್ಯಕತೆ ಇದ್ದರೂ ಶಾಲೆಗಳನ್ನು ಕೊಡುವುದಿಲ್ಲ ಅಂತಲಾ?

ಶ್ರೀ ಬಿ.ಎ.ಮೊಯ್ದೀನ್: ಈಗ ನಿಮಗೆ ವಿಚಾರ ಗೊತ್ತಿಲ್ಲವೆಂದು ಕಾಣುತ್ತದೆ. ಇವತ್ತು ನಾವು ಕೊಟ್ಟಿರತಕ್ಕಂಥ ಕಾಲೇಜುಗಳಲ್ಲಿ ಅವುಗಳಲ್ಲಿ 30 ಫಸ್ಟ್‌ಗ್ರೇಡ್ ಕಾಲೇಜುಗಳಲ್ಲಿ 50ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇದ್ದಾರೆ. ಅವರನ್ನು ಏನು ಮಾಡಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲಿ ಕೇಳಿ. 50ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇರತಕ್ಕಂಥ ಕಡೆ ಕಾಲೇಜನ್ನು ಕೊಡುವಾಗಲೇ ಎಲ್ಲಿ ಕೊಡಬೇಕು ಎಲ್ಲಿ ಕೊಡಬಾರದು ಎಂದು ಆಲೋಚನೆ ಮಾಡಬೇಕಿತ್ತು. ಆದರೆ ಕೆಲವು ಕಡೆ ತೀರಾ ಅವಶ್ಯಕತೆ ಇದ್ದರೂ ಕೂಡ ಕಾಲೇಜನ್ನು ಕೊಡುವುದಿಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಸರ್ಕಾರ ಬಂದುಬಿಟ್ಟರೆ

ಸರಿಯಲ್ಲ. ಹಾಗಾದರೆ ನಿಮಗೆ ಕರ್ನಾಟಕದಲ್ಲಿ ಕಾಲೇಜುಗಳು ಬೇಡವೇನು? ಇವತ್ತು ಬಿಡಿ, ಕಾಲೇಜುಗಳು ಜಾಸ್ತಿ ಇವೆ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆಯೆಂದು ಹೇಳುತ್ತಿದ್ದೀರಿ. ನಾಳೆ ಏನಾದರೂ ಅವಶ್ಯಕತೆ ಇದ್ದರೆ ಏನು ಮಾಡುತ್ತೀರಿ? ಜನಸಂಖ್ಯೆ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಬೇಕು ಎಂದು ನಿನ್ನೆ ತಾನೆ ನೀವು ಮಾನವ ಅಭಿವೃದ್ಧಿ ಪುಸ್ತಕವನ್ನು ಬಿಡುಗಡೆ ಮಾಡುವಾಗ ಹೇಳಿದ್ದೀರಿ. ಮತ್ತೆ ಕಾಲೇಜುಗಳನ್ನು ತೆರೆಯುವುದಿಲ್ಲ ಎಂದರೆ ಅವರ ಗತಿ ಏನು?

ಶ್ರೀ ಬಿ.ಎ.ಮೊಹಿದ್ದೀನ್: ಈ ವರ್ಷ ಕೊಡದೇ ಇರಬಹುದು. ಇದು ಸರ್ಕಾರ ನಡೆಸತಕ್ಕಂಥಾದ್ದು - It is dynamic, it is static like society. As society develops, as demand comes in Government has to react to it. As things stand today, ಇವತ್ತಿನ ವಾತಾವರಣವನ್ನು, ಇವತ್ತಿನ ಚಿತ್ರವನ್ನು ನಿಮ್ಮ ಮುಂದೆ ನಾನು ಇಟ್ಟಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ಓಪನ್‌ಮೈಂಡ್‌ನಲ್ಲಿ ಇರಿ. ತೆಗೆಯುವುದೇ ಇಲ್ಲವೆಂದು ಹೇಳಿಬಿಡಬೇಡಿ.

ಶ್ರೀ ಬಿ.ಎ.ಮೊಯ್ದೀನ್: ಇದರ ಬಗ್ಗೆ ಬೇಕಾದರೆ ಮುಂದೆ ನಾವು ನಮ್ಮ ಡಿಗ್ರಿಗಳು ಹೇಗಿರಬೇಕು ಎಂಬುದರ ಬಗ್ಗೆ ಚರ್ಚೆ ಮಾಡೋಣ. ಆ ದಿವಸ ನಾನು ಹೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ಹೊಸದಾಗಿ ಕಾಲೇಜು ಏನು ಪ್ರಾರಂಭ ಮಾಡಿದ್ದೀರಿ, ಆ ಕಟ್ಟಡಕ್ಕೆ ಹಣವಾದರೂ ಕೊಡಿ.

ವಸಂತ ವಿ.ಸಾಲಿಯಾನ: ಒಂದು ವಿಚಾರ ಏನೆಂದರೆ ಮಾನ್ಯ ಮಂತ್ರಿಗಳು ಹೇಳಿದಂತೆ ನನ್ನ ಕ್ಷೇತ್ರದಲ್ಲಿ ಒಂದು ಸರ್ಕಾರಿ ಕಾಲೇಜು ಬೇಕು ಎಂದು ನಾವು ಪ್ರಾರಂಭ ಮಾಡಿದ್ದೇವೆ. ಅಲ್ಲಿ ಎಲ್ಲ ವ್ಯವಸ್ಥೆಯನ್ನು ಕೂಡ ನಾವೇ ಸಾರ್ವಜನಿಕವಾಗಿ ಮಾಡಿದ್ದೇವೆ. ಲೈಬ್ರರಿಯನ್ನು ನಾವೇ ಕಟ್ಟಿದ್ದೇವೆ, ಫರ್ನಿಚರ್ಸ್‌ನ್ನು ನಾವೇ ಕೊಟ್ಟಿದ್ದೇವೆ. ಪಾರ್ಟಟೈಮ್ ಲೆಕ್ಚರರ್ಸ್ ವ್ಯವಸ್ಥೆ ಕೂಡ ನಾವೇ ಮಾಡಿದ್ದೇವೆ. ನೀವು ಇಷ್ಟರವರೆಗೂ ಅಧ್ಯಾಪಕರನ್ನು ಕೊಟ್ಟಿಲ್ಲ. ಒಬ್ಬ ಪ್ರಿನ್ಸಿಪಾಲರನ್ನೂ ನೀವು ಕೊಟ್ಟಿಲ್ಲ. ಐದು ವರ್ಷಗಳಿಂದ ನಿಮ್ಮ ಸರ್ಕಾರ ಏನು ಮಾಡಿದ್ದೀರಿ ಎಂದು ಹೇಳಿ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅದಕ್ಕೆ ನಾವು ಫೌಂಡೇಶನ್ ಹಾಕಿದ್ದೇವೆ. 18 ಲಕ್ಷ ರೂಪಾಯಿಗಳಿಗೆ ನಾವು ಅಡ್ಮಿನಿಷ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೆವು. ಆದರೆ ನಿಮ್ಮ ಸರ್ಕಾರ ಬಂದಮೇಲೆ ನೀವು ಕೊಟ್ಟಿದ್ದು ಏನೂ ಇಲ್ಲ. ನಿಮ್ಮ ಸರ್ಕಾರದಿಂದ ಕಳೆದ ಐದು ವರ್ಷಗಳಲ್ಲಿ ಒಂದು ಪೈಸೆ ಕೂಡ ಬಿಡುಗಡೆಯಾಗಿಲ್ಲ. ಇಲ್ಲಿ ನೀವು ತಪ್ಪು ಅಭಿಪ್ರಾಯವನ್ನು ಕೊಟ್ಟು 8 ಲಕ್ಷ 65 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಖಂಡಿತವಾಗಿಯೂ ಇದನ್ನು

ಕೊಟ್ಟಿಲ್ಲ. ಒಬ್ಬ ಕಂಟ್ರಾಕ್ಟರ್‌ಗೆ ಒಂದು ಲಕ್ಷ ರೂಪಾಯಿ ಮಾತ್ರ ನೀವು ಕೊಟ್ಟಿದ್ದೀರಿ. ಬಾಕಿ ಉಳಿದ ಹಣವನ್ನು ಯಾರಿಗಾದರೂ ನೀವು ಕೊಟ್ಟಿದ್ದೀರಿ? ಆದರೆ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅದು ಬಿಡುಗಡೆಯಾಗಿಯೇ ಇಲ್ಲ. ತಪ್ಪು ಅಭಿಪ್ರಾಯವನ್ನು ನಿಮ್ಮ ಅಧಿಕಾರಿಗಳು ನಿಮಗೆ ಕೊಟ್ಟಿದ್ದಾರೆ. ತಾವು ಒಳ್ಳೆಯ ಮಂತ್ರಿಗಳು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಪ್ಪು ಅಭಿಪ್ರಾಯವನ್ನು ಈ ಸದನಕ್ಕೆ ಕೊಡಬಾರದು. ಆದ್ದರಿಂದ ನಾನು ಇವತ್ತು ತಮ್ಮ ಹತ್ತಿರ ಬೇಡಿಕೊಳ್ಳುವುದು ಇಷ್ಟೇ. ಅದೇನೆಂದರೆ ಇನ್ನು ಒಂದು ತಿಂಗಳಲ್ಲಿ ಅಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಬೇಕು. ಇಲ್ಲದಿದ್ದರೆ ನಮಗೆ ಬೇರೆ ವ್ಯವಸ್ಥೆ ಇಲ್ಲ. ಏಕೆಂದರೆ ಹಾಸ್ಟೆಲ್‌ನಲ್ಲಿ ನಾವು ವಿದ್ಯಾಭ್ಯಾಸ ಮಾಡುತ್ತಿದ್ದೇವೆ.

ಶ್ರೀ ಬಿ.ಎ.ಮೊಹಿದ್ದೀನ್: ಈಗ ನಾವು ಕೊಟ್ಟಿರತಕ್ಕಂಥ ಫಿಗರ್ಸ್‌ನ್ನು ಅವರು ಡಿಸ್‌ಪ್ಯುಟ್ ಮಾಡುತ್ತಿದ್ದಾರೆ. ನಾನು ಇದನ್ನು ಎನ್‌ಕ್ವೈರಿ ಮಾಡಿಸಿ ಕರೆಕ್ಟ್ ಫಿಗರ್ಸ್‌ನ್ನು ಅವರಿಗೆ ಕೊಡುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ನನಗೆ ನಿಮ್ಮ ಮಾಹಿತಿ ಬೇಡ. ಕಟ್ಟಡ ಪೂರ್ಣವಾಗಬೇಕು ಅಷ್ಟೆ. ಮತ್ತೆ ಅಧ್ಯಾಪಕರನ್ನು ನೀವು ಯಾವಾಗ ಭರ್ತಿ ಮಾಡುತ್ತೀರಿ? ನಿನ್ನೆ ಸಹ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ.

ಶ್ರೀ ಬಿ.ಎ.ಮೊಹಿದ್ದೀನ್: ಆಯಿತು, ನಾನು ಹೇಳಿದ್ದೇನಲ್ಲ. ತಪ್ಪು ಮಾಹಿತಿ ಎಂದರೆ ಅದನ್ನು ನಾನು ಗಂಭೀರವಾಗಿ ಪರಿಗಣಿಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ಅಧ್ಯಾಪಕರ ಕೊರತೆಯನ್ನು ಯಾವಾಗ ನೀಗಿಸುತ್ತೀರಿ? ಇದಕ್ಕೆ ಏನು ತೊಂದರೆ ಇದೆ. ಬೇಕಾದರೆ ಅವರನ್ನು ಡೆಪ್ಯುಟೇಶನ್ ಮೇಲೆ ನೇಮಕ ಮಾಡಿ. ದಯವಿಟ್ಟು ಎಲ್ಲಿ ಜಾಸ್ತಿ ಇದ್ದಾರೆ ಅವರನ್ನು ನಮ್ಮ ಕಾಲೇಜಿಗೆ ಡೆಪ್ಯುಟೇಶನ್ ಮಾಡಿ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ಸನ್ಮಾನ್ಯ ಉಪಾಧ್ಯಕ್ಷರೇ, ಶೇಕಡಾ ಐವತ್ತು ವಿದ್ಯಾರ್ಥಿಗಳು ಇರತಕ್ಕಂಥ ಕಾಲೇಜುಗಳು ಇವೆಯೆಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಂತಹ ಕಾಲೇಜಿನಿಂದ ಹೆಚ್ಚಿನ ಉಪನ್ಯಾಸಕರನ್ನು ಈ ಕಾಲೇಜಿಗೆ ಕಳಿಸಬಹುದು. ನಮ್ಮ ಕಾಲೇಜಿಗೆ ಆಗಲಿ, ಕಾಪು ಕಾಲೇಜಿಗೆ ಆಗಲಿ ಕಳಿಸಬಹುದಲ್ಲ?

ಶ್ರೀ ಬಿ.ಎ.ಮೊಹಿದ್ದೀನ್: ಆಯಿತು. ಟೀಚರ್ಸ್‌ನ್ನು ಕೊಡುತ್ತೇನೆ.

ಶಿಗ್ಗಾಂವ್ ಮತ್ತು ಸವಣೂರು ಆಸ್ಪತ್ರೆಗಳ ನವೀಕರಣ.